ಬೆಳ್ತಂಗಡಿ ನೂತನ ಬಸ್ ನಿಲ್ದಾಣ ನಿರ್ಮಾಣದ ಬಗ್ಗೆ

೪೯೯. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಳ್ತಂಗಡಿಗೆ ನೂತನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಮಂಜೂರಾಗಿರುವುದು ನಿಜವೆ ?

(ಆ) ಹಾಗಿದ್ದಲ್ಲಿ ಎಷ್ಟು ಸಮಯದೊಳಗೆ ಕೆಲಸ ಪ್ರಾರಂಭಿಸಲಾಗುವುದು ?

(ಇ) ಮಂಜೂರಾಗದೆ ಇದ್ದಲ್ಲಿ ಎಷ್ಟು ಅವಧಿಯೊಳಗೆ ಮಂಜೂರು ಮಾಡಲಾಗುವುದು?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ಮಂತ್ರಿಗಳು)—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಸೂಕ್ತವಾದ ಜಮೀನನ್ನು ಸ್ವಾಧೀನಪಡಿಸಿಕೊಂಡು ನಂತರ ಈ ವಿಷಯವನ್ನು ಪರಿಗಣಿಸಲಾಗುವುದು.

ಗುಲ್ಬರ್ಗಾದಲ್ಲಿ ಹಳ್ಳಿಗಳ ಸಾರಿಗೆ ವ್ಯವಸ್ಥೆ ಬಗ್ಗೆ

೨೦೫. ಶಾಣಪ್ಪ (ಹುಮ್ನಾಬಾದ್)—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಗುಲ್ಬರ್ಗಾದಲ್ಲಿ ಖಾಸಗಿ ಬಸ್ ರಸ್ತೆಗಳನ್ನು ರಾಷ್ಟ್ರೀಕರಣಗೊಳಿಸಿದ ನಂತರ ಸಾರಿಗೆ ಇಲಾಖೆಯವರು ಅನೇಕ ಹಳ್ಳಿಗಳಿಗೆ ಬಸ್ಸುಗಳನ್ನು ಓಡಿಸುತ್ತಿದ್ದಾರೆಂಬುದು ಸರ್ಕಾರದವರ ಗಮನದಲ್ಲಿ ಇದೆಯೆ ?

(ಆ) ಅಂತಹ ಬಸ್ ಮಾರ್ಗಗಳ ಸಂಖ್ಯೆ ಎಷ್ಟು ?

(ಇ) ಈ ಸಾಲಿನ ಜೂನ್ ತಿಂಗಳಿಂದ ಈ ಸೌಕರ್ಯ ಅನೇಕ ಹಳ್ಳಿಗಳಿಗೆ ನಿಲ್ಲಿಸಿರುವುದಕ್ಕೆ ಕಾರಣಗಳೇನು ?

(ಈ) ಪುನಃ ಇಂತಹ ಹಳ್ಳಿಗಳ ಜನರಿಗೆ ಸದರೀ ಸೌಲಭ್ಯವನ್ನು ಒದಗಿಸಲಾಗುವುದೇ ?

ಶ್ರೀ ವೀರಣ್ಣ (ಸಾರಿಗೆ ಹಾಗೂ ಬಂದಿಖಾನೆ ಮಂತ್ರಿಗಳು)—

(ಅ) ಹೌದು.

(ಆ) ರಾಷ್ಟ್ರೀಕರಣಕ್ಕೆ ಮೊದಲು ೪೩೨ ಮಾರ್ಗಗಳಿದ್ದು ರಾಷ್ಟ್ರೀಕರಣದ ನಂತರ ೭೦೩ ಮಾರ್ಗಗಳಾಗಿರುತ್ತದೆ ಮತ್ತು ೧೬೦ ಹಳ್ಳಿಗಳಿಗೆ ಹೊಸದಾಗಿ ಸಾರಿಗೆ ಸೌಕರ್ಯವನ್ನು ಕಲ್ಪಿಸಲಾಗಿದೆ.

(ಇ) ಮಳೆಗಾಲದ ಪರಿಣಾಮವಾಗಿ ಕೆಲವು ಹಳ್ಳಿಗಳ ರಸ್ತೆ ಭಾರೀ ವಾಹನಗಳ ಓಡಾಟಕ್ಕೆ ಯೋಗ್ಯವಾಗಿಲ್ಲದ ಹಾಗೂ ಸಾರಿಗೆ ಬೇಡಿಕೆ ತೀವ್ರವಾಗಿ ಕಂಡಿದಿರುವ ಕಾರಣ ಕೆಲವು ಹಳ್ಳಿಗಳಿಗೆ ಬಸ್ ಸಾರಿಗೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

(ಈ) ಹೌದು. ಮಳೆಗಾಲದ ಅವಧಿ ತೀರಿದ ನಂತರ ಅಂದರೆ ಅಕ್ಟೋಬರ್ ತಿಂಗಳ ನಂತರ ಈ ಹಳ್ಳಿಗಳಿಗೆ ಬಸ್ ಸಾರಿಗೆಯನ್ನು ಪುನರಾರಂಭಿಸಲಾಗುವುದು.